**ಸಾಕ್ಷಿಯನ್ನು ದಿಃ 22.06.2024 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**<u>ಪಾಟೀ ಸವಾಲುಃ</u> ಪ್ರತಿವಾದಿ ಪರ ಶ್ರೀ ಎಸ್.ಆರ್.ಎಸ್ ವಕೀಲರಿಂದಃ**

ನಾನು ದೊಡ್ಡಚಿನ್ನಹಳ್ಳಿಯಲ್ಲಿರುವ ನನ್ನ ತಾಯಿ ಮನೆಯಲ್ಲಿ ವಾಸಿಸುತ್ತೇನೆ. ಪ್ರತಿವಾದಿ ನನ್ನ ಸಂಬಂಧಿಕಳಾಗಬೇಕು. ಸದರಿ ದಾವೆಯನ್ನು ನಾನು ನಿವೇಶನಕ್ಕೆ ಸಂಬಂಧಿಸಿದಂತೆ ಹೂಡಿರುತ್ತೇನೆ. ದಾವಾ ಆಸ್ತಿಯಲ್ಲಿ ಒಂದು ಚಿಕ್ಕ ಮನೆ ಇರುತ್ತದೆ. ಅದರ ವಿಸ್ತೀರ್ಣವನ್ನು ನನಗೆ ಹೇಳಲು ಬರುವುದಿಲ್ಲ. ಸದರಿ ದಾವಾ ಆಸ್ತಿಯನ್ನು ಖರೀದಿಸುವ ಮೊದಲೇ ಅಲ್ಲಿ ಒಂದು ಚಿಕ್ಕ ಮನೆ ಇತ್ತು. ದಾವಾ ಆಸ್ತಿಯನ್ನು ಖರೀದಿ ಮಾಡಿರುವ ಕ್ರಯಪತ್ರದಲ್ಲಿ ದಾವಾ ಆಸ್ತಿಯಾದ ವಿ.ಪಿ ಖಾತೆ ನಂಃ108 ರಲ್ಲಿ ಮನೆ ಇರುವ ಬಗ್ಗೆ ನಮೂದು ಇರುತ್ತದೆ. ಸದರಿ ಆಸ್ತಿಯನ್ನು ನಾವು ಸುರೇಶ್ ಕುಮಾರ್ ರವರ ಕಡೆಯಿಂದ ಖರೀದಿ ಮಾಡಿರುತ್ತೇನೆ. ಸದರಿ ಸುರೇಶ್ ಕುಮಾರ್ ರವರು ತಿಮ್ಮರಾಯಪ್ಪ ಎಂಬುವವರಿಂದ ಖರೀದಿ ಮಾಡಿರುತ್ತಾರೆ. ಸುರೇಶ್ ಕುಮಾರ್ ರವರು ತಿಮ್ಮರಾಯಪ್ಪನ ಕಡೆಯಿಂದ ಖರೀದಿ ಮಾಡಿರುವ ಕ್ರಯಪತ್ರವನ್ನು ನಾನು ಮಾನ್ಯ ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆ. ಸದರಿಯವರ ಕ್ರಯಪತ್ರದಲ್ಲಿ ದಾವಾ ಆಸ್ತಿಯಾದ ವಿ.ಪಿ ಖಾತೆ ನಂಃ108 ರಲ್ಲಿ ಮನೆ ಇರುವ ಬಗ್ಗೆ ನಾನು ನೋಡಿರುವುದಿಲ್ಲ. ನಾನು ನನ್ನ ವಾದಪತ್ರದಲ್ಲಿ ವಿಪಿ ಖಾತಾ ನಂಃ108 ರಲ್ಲಿ ಮನೆ ಇರುವ ಬಗ್ಗೆ ನಮೂದಿಸಿರುತ್ತೇನೆ.

ಪ್ರತಿವಾದಿಯು ನನ್ನ ವಿರುದ್ಧ ಅಸಲು ದಾವಾ ನಂಃ260/2022 ಎಂಬ ದಾವೆಯನ್ನು ಇದೇ ನ್ಯಾಯಾಲಯದಲ್ಲಿ ಹೂಡಿರುತ್ತಾರೆ ಎಂದರೆ ಸರಿ. ಸರ್ವೆ ನಂಃ2/13 ಕ್ಷೇತ್ರ 8.12 ಗುಂಟೆ ನಮಗೆ ಯಾವುದೇ ರೀತಿಯ ಸಂಬಂಧ ಇರುವುದಿಲ್ಲ ಎಂದರೆ ಸರಿ. ಸದರಿ ಸರ್ವೆ ನಂಃ2/13 ರ ಚೆಕ್ಕುಬಂಧಿಯನ್ನು ನನಗೆ ಹೇಳಲು ಬರುವುದಿಲ್ಲ. ಪ್ರತಿವಾದಿಯು ತಮ್ಮ ಪ್ರತಿವಾದ ಪತ್ರದಲ್ಲಿ ಜಮೀನು ತಮ್ಮದಿರುವ ಬಗ್ಗೆ ತಕರಾರನ್ನು ಹಾಕಿರುತ್ತಾರೆ. ದಾವಾ ಸ್ವತ್ತಿನ ಯಾವ ದಿಕ್ಕಿನ ಕಡೆಗೆ ರಸ್ತೆ ಇರುವುದಿಲ್ಲ ಎಂದರೆ ಸರಿ. ಪ್ರತಿವಾದಿಗೆ ಎಷ್ಟು ಜನ ಮಕ್ಕಳು ಎಂಬ ಬಗ್ಗೆ ನನಗೆ ಗೊತ್ತಿಲ್ಲ. ಪ್ರತಿವಾದಿಯು ತನ್ನ ಮಕ್ಕಳಿಗೆ ಮದುವೆ ಮಾಡಿ ತಾನು ಒಬ್ಬಳೇ ವಾಸಿಸುತ್ತಿದ್ದಾಳೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು

ಅವರೊಂದಿಗೆ ಅವರ ಕುಟುಂಬಸ್ಥರು ವಾಸಿಸುತ್ತಿದ್ದಾರೆ ಎಂದು ನುಡಿಯುತ್ತಾರೆ. ನಾವು ಖರೀದಿ ಮಾಡಿರುವ ಜಮೀನನ್ನು ಪ್ರತಿವಾದಿ ತಮ್ಮದೆಂದು ತಕರಾರು ತೆಗೆದಿರುವ ಕಾರಣದಿಂದಾಗಿ ನಾನು ಸದರಿ ದಾವೆಯನ್ನು ಹೂಡಿರುತ್ತೇನೆ. ದಾವಾ ಸ್ವತ್ತಿನ ನಿರ್ದಿಷ್ಟ ಕ್ಷೇತ್ರವನ್ನು ನನಗೆ ಹೇಳಲು ಬರುವುದಿಲ್ಲ. ಸಾಕ್ಷಿ ಮುಂದುವರೆದು ಸದರಿ ಆಸ್ತಿಯು ಪೂರ್ವ – ಪಶ್ಚಿಮ 33 ½ ಅಡಿಗಳು ಮತ್ತು ಉತ್ತರ – ದಕ್ಷಿಣ 33 ½ ಅಡಿಗಳು ಇರಬಹುದು ಎಂದು ನುಡಿಯುತ್ತಾರೆ. ಪ್ರತಿವಾದಿ ನಮ್ಮ ವಿರುದ್ಧ ಹೂಡಿರುವ ಅಸಲು ದಾವಾ ನಂಃ260/2022 ರಲ್ಲಿ ಮಾನ್ಯ ನ್ಯಾಯಾಲಯದಿಂದ ನಮ್ಮ ವಿರುದ್ಧ ನಿರ್ಬಂಧಕಾಜ್ಞೆ ಪಡೆದುಕೊಂಡಿರುತ್ತಾರೆ ಎಂದರೆ ಸರಿಯಲ್ಲ.

**ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು, ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆ ಮೇರೆಗೆ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ.

**(ಸುಕೀತಾ ಎಸ್ ಹದ್ಲಿ)**
1 ನೇ ಅಪರ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ, ಬಂಗಾರಪೇಟೆ